# ಆಹಾ ಸುದ್ದಿ!

★ ಸಸಿತೋಟ



ಚೀನಾದ ಈ ಕಲಾವಿದ ಹ್ಯಾನ್ ನಾಲಿಗೆಯಲ್ಲಿ ಚಿತ್ರ ಬರೆಯುತ್ತಾನೆ. ನಾಲಿಗೆಯನ್ನು ಬಣ್ಣದಲ್ಲಿ ಅದ್ದಿ ಕಾಗದದ ಮೇಲೆ ಚಿತ್ರಿಸುತ್ತಾನಂತೆ. ಕೈಗಳಿಲ್ಲದವರು ಹೀಗೆ ಚಿತ್ರ ಬಿಡಿಸಿ ಪ್ರತಿಭೆ ಮೆರೆದವರಿದ್ದಾರೆ. ಆದರೆ ಕೈಗಳಿದ್ದೂ ಅವುಗಳ ಹಕ್ಕನ್ನು ಹೀಗೇಕೆ ಕಸಿಯಲು ಹೊರಟಿದ್ದಾನೋ ಈ ಹ್ಯಾನ್.

ಜಪಾನಿನಲ್ಲಿ ಸಾವಿನ ನಂತರ ಶವ ಪೆಟ್ಟಿಗೆ, ಸಮಾಧಿಯ ವಿನ್ಯಾಸ, ಶವ ಯಾತ್ರೆ ಹೇಗಿರಬೇಕು ಎಂಬುದನ್ನು ಜೀವಂತವಿದ್ದಾಗಲೇ ನಿರ್ಧರಿಸಿಕೊಳ್ಳುತ್ತಾರಂತೆ. 'ಬದುಕಿನ ನಂತರ' ದ ತಯಾರಿ ಕುರಿತು ಅಲ್ಲಿ ಸಂಬಂಧಿಕರನ್ನು ನಂಬುವ ಸ್ಥಿತಿ ಕಣ್ಮರೆಯಾಗುತ್ತಿದ್ದು, ಈ ಬಗ್ಗೆ ನಿರ್ವಹಣಾ ಕಂಪೆನಿಗಳೂ ಲಾಭ ಮಾಡಿಕೊಳ್ಳುತ್ತಿವೆ. ಹುಟ್ಟು ಮಾತ್ರ ಆಕಸ್ಮಿಕ, ಉಳಿದವುಗಳು ಮೊದಲೇ ನಿರ್ಧಾರವಾಗಿರುತ್ತವೆ ಅಲ್ಲವೇ?



ಒರೆಗಾನಿನ ಚಲನಚಿತ್ರ ನಿರ್ಮಾಪಕ ಮಾರಿಯೊ ಗಾರ್ಜಾ ಕ್ಯಾಮೆರಾ ಕಡೆ ಮುಖ ಮಾಡಿ 'ಹ್ಯಾಪಿ ಬರ್ಥ್‌ಡೇ ಸಾರಾ' ಎಂದು ಹೇಳುವಂತೆ ಜನರಿಗೆ ಮನವಿ ಮಾಡುವ ಫಲಕವನ್ನು ಕತ್ತಿಗೆ ಹಾಕಿಕೊಂಡು ಮಾರುಕಟ್ಟೆಯಲ್ಲಿ ನಿಂತುಕೊಂಡ. ಜನಕ್ಕೇನು! ತಮಾಷೆಗೆಂಬಂತೆ ಹೇಳುತ್ತ ಹೋದರು. ಸಾವಿರಾರು ಮಂದಿ ಹೇಳಿದ ಶುಭಾಶಯಗಳನ್ನು ಮುದ್ರಿಸಿಕೊಂಡು ತನ್ನ ಗೆಳತಿಗೆ ಉಡುಗೊರೆಯಾಗಿ ಕೊಟ್ಟನಂತೆ. ಯು ಟ್ಯೂಬ್‌ನಲ್ಲಿ ಹರಿದಾಡಿದ ಮೇಲೆ ಇನ್ನೂ ಸಾವಿರಾರು ಮಂದಿ ಫೇಸ್‌ಬುಕ್‌ನಲ್ಲಿ ಶುಭಾಶಯ ಕೋರಿದರಂತೆ. ಕಾಸು ಖರ್ಚಿಲ್ಲದೆ ಗೆಳತಿಯ ಮೇಲೆ ಮೋಡಿ ಮಾಡುವುದೆಂದರೆ ಹೀಗೆಯೇ ಇರಬಹುದು.

ಲಂಡನ್ನಿನಲ್ಲಿ ತೆರೆಯಲಾಗಿರುವ ವಿಕ್ಟರ್ ವಿಂಡ್ ಕ್ಯೂರಿಯಾಸಿಟಿ ವಸ್ತು ಸಂಗ್ರಹಾಲಯದಲ್ಲಿ ಏನುಂಟು ಏನಿಲ್ಲ! ಲೈಂಗಿಕ ಆಟಿಕೆಗಳಿಂದ ಹಿಡಿದು ಖ್ಯಾತನಾಮರ ಮಲ- ಮೂತ್ರಗಳನ್ನೂ ಸಂಗ್ರಹಿಸಿ ಇಟ್ಟಿದ್ದಾರಂತೆ. ಖ್ಯಾತ ನಟ ರಸೆಲ್ ಕ್ರೋವ್‌ನ ಮೂತ್ರ, ನಟಿ ಕೈಲಿ ಮಿನೋಗ್ ಹಾಗೂ ಗಾಯಕಿ ಆ್ಯಮಿ ವೈನ್‌ಹೌಸ್‌ಳ ಮಲ ಕೂಡಾ ಅಲ್ಲಿದೆಯಂತೆ. ಹಣ ಕೊಟ್ಟು ನೋಡುವವರು ಅದೇನು ಖುಷಿ ಪಡುತ್ತಾರೋ!



ಸಿಂಗಾಪುರದಲ್ಲಿರುವ ಸಾಕುಪ್ರಾಣಿಗಳ ಐಷಾರಾಮಿ ಹೊಟೇಲ್‌ನಲ್ಲಿ ಈ ಸಾಕು ನಾಯಿಗಳಿಗೆ ಈಜುಕೊಳದಲ್ಲಿ ಭರ್ಜರಿ ಸ್ನಾನದ ಪುಳಕ. ಸಿರಿವಂತರ ಖಯಾಲಿಗಳನ್ನು ನಗದು ಮಾಡಿಕೊಳ್ಳಲು ಅಲ್ಲಿ ಈ ಹೊಟೇಲ್ ಆರಂಭವಾಗಿದೆಯಂತೆ. ಶ್ರೀಮಂತ ಮಾಲೀಕ ಇನ್ನಾವ ಬೆರಕೆ ದ್ರವದಲ್ಲೋ ಮುಳುಗೇಳುತ್ತಿದ್ದರೆ, ಆತನ ನಾಯಿಗೆ ಶುದ್ಧ ದ್ರವದಲ್ಲಿ ಮುಳುಗು ಹಾಕುವ ಸುಖ.

ತಲೆ ಕೆಳಗಾದ ಮನೆಯಾಯ್ತು, ಈಗ ತಲೆಕೆಳಗಾದ ಟ್ರಕ್ ಸರದಿ. ಅಮೆರಿಕದ ರಿಕ್ ಎಂಬಾತ 90ರ ಫೋರ್ಡ್ ರೇಂಜರ್ ಟ್ರಕ್‌ಗೆ ಇನ್ನೆರಡು ಟ್ರಕ್‌ಗಳ ಬಾಡಿಯನ್ನು ಬೆಸೆದು ಆರು ತಿಂಗಳಲ್ಲಿ ಇದನ್ನು ತಯಾರು ಮಾಡಿದನಂತೆ. ಸದ್ಯ, ತಲೆ ಕೆಳಗೆ, ಕಾಲು ಮೇಲೆ ಮಾಡಿ ಕೈಗಳಲ್ಲೇ ಓಡಾಡುವುದು ಸರ್ಕಸ್, ಸಿನಿಮಾಗಳಲ್ಲಿ ಮಾತ್ರ. ಇನ್ನು ಮುಂದೆ ತಲೆ ಕೆಳಗಾಗಿ ತಿನ್ನುವುದು, ನಿತ್ಯ ಕರ್ಮಗಳನ್ನು ಮಾಡುವುದು ಬಂದರೂ ಬರಬಹುದು.

